**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 100/2020</u>**

**<u>ಸಿ.ಡಬ್ಲ್ಯೂಃ 10 ಪಿ.ಡಬ್ಲ್ಯೂಃ 7</u>**

ಸಾಕ್ಷಿದಾರನ ಹೆಸರು : ಶ್ರೀಧರ್ ಕೆ

ತಂದೆಯ ಹೆಸರು : ಕಟ್ಟಪ್ಪ ರಾವ್

ವಯಸ್ಸು : 79 ವರ್ಷ

ಕೆಲಸ : ನಿವೃತ್ತ ವ್ಯಾಪಾರಿ

ವಾಸ : ಬಳ್ಳಾರಿ

**ಸಾಕ್ಷಿಯ ವಿಚಾರಣೆಯನ್ನು ವೀಡಿಯೋ ಕಾನ್ಫರೆನ್ಸ ಮೂಲಕ ಪಡೆದುಕೊಳ್ಳಲಾಯಿತು.**

**<u>ಸಾಕ್ಷಿಗೆ ದಿನಾಂಕಃ 10.08.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ಚಾಸಾ 11 ರವರು ಪರಿಚಯ ಇಲ್ಲ. ಆರೋಪಿ ನಂ 4 ಪರಿಚಯ ಇಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

## <u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

2. ಆರೋಪಿ ನಂ 3 ನನ್ನ ಮಾಲೀಕತ್ವದ ವೈನ್ ಶಾಪ್ ನಲ್ಲಿ ವೆಂಡರ್ ಆಗಿ ಕೆಲಸ ಮಾಡುತ್ತಿದ್ದು ನಾನು ಲೆಕ್ಕವನ್ನು ಪರಿಶೀಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ದಿಃ10.09.2019 ರಂದು ಆತನು ನನ್ನ ಬಳಿ ಬಂದು ತಾನು ದಿಃ 02.09.2019 ರಂದು ಆರೋಪಿ ನಂ 1 ಮತ್ತು 2 ರವರಿಗೆ ಏಳು ಬಾಕ್ಸ ಮದ್ಯವನ್ನು ಕೊಟ್ಟಿದ್ದು ಅದನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾಗ ಪೋಲಿಸರು ದಾಳಿ ಮಾಡಿ ಅವರನ್ನು ಹಿಡಿದು ಪಂಚನಾಮೆ ಮಾಡಿ ಪ್ರಕರಣದ ದಾಖಲಿಸಿರುವ ವಿಷಯವನ್ನು ತಿಳಿಸಿದನು ಎಂದರೆ ಸರಿಯಲ್ಲ. 3 ನೇ ಆರೋಪಿಯು ನನಗೆ ಗೊತ್ತಿಲ್ಲದೆ ಆರೋಪಿ

ನಂ 1 ಮತ್ತು 2 ರವರಿಗೆ ಮದ್ಯವನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ "ನಾನು.................ತಿಳಿದು ಬಂದಿರುತ್ತದೆ" ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿಃ 10 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಧೀಶರು, ಸಿರುಗುಪ್ಪ .**